

ಕಡಿದಾಳ್ ಮಂಜಪ್ಪ ಅವರಿಂದ ಜಯಚಾಮರಾಜ ಒಡೆಯರ್ ಅವರಿಗೆ ಪುಷ್ಪಗುಚ್ಛ



ಸರ್. ಎಂ.ವಿಶ್ವೇಶ್ವರಯ್ಯ ಅವರೊಂದಿಗೆ ಒಡೆಯರ್ ಮಾತುಕತೆ



ವಿಧಾನಸಭೆಯಲ್ಲಿ ಬಜೆಟ್ ಅಧಿವೇಶನ ಉದ್ಘಾಟನೆ ವೇಳೆ ರಾಜ್ಯಪಾಲ ಜಾಯಚಾಮರಾಜ ಒಡೆಯರ್

ಕಾಲಘಟ್ಟವೂ ಹೌದು. ಈ ಸಂಕೀರ್ಣ ಸಂದರ್ಭದಲ್ಲಿ ಎದುರಾದ ಆರ್ಥಿಕ ಸಂಕಷ್ಟಗಳನ್ನು ಸಮರ್ಥವಾಗಿ ನಿಭಾಯಿಸಿ ಪ್ರಜಾಸರ್ಕಾರ ಸ್ಥಾಪನೆಗೆ ಅನುವು ಮಾಡಿಕೊಟ್ಟ ಹೆಗ್ಗಳಿಕೆ ಜಯಚಾಮರಾಜ ಒಡೆಯರ್ ಅವರದು. ರಾಜಮನೆತನದ ಸುಪರ್ದಿಯಲ್ಲಿದ್ದ ಮೈಸೂರಿನ ಹಲವು ಕಟ್ಟಡ, ನಿವೇಶನಗಳನ್ನು ಸಾರ್ವಜನಿಕ ಸಂಘ–ಸಂಸ್ಥೆಗಳಿಗೆ ಕೊಡ ಮಾಡಿದ ಅವರು, ನಾಡಿನಲ್ಲಿ ಅನೇಕ ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾದರು.

ದಸರಾ ಉತ್ಸವಕ್ಕೆ ಸಾಂಸ್ಕೃತಿಕ ಸ್ಪರ್ಶ ನೀಡುವಲ್ಲಿ ಜಯಚಾಮರಾಜರ ಕೊಡುಗೆ ಉಲ್ಲೇಖನೀಯ. ದೇಶ ವಿದೇಶಗಳ ಸಂಗೀತ ಕಲಾವಿದರನ್ನು ಆಹ್ವಾನಿಸಿ ದಸರೆ ಕಳೆಕಟ್ಟಲು ಕಾರಣರಾದ ಒಡೆಯರ್, ಕರ್ನಾಟಕ ಸಂಗೀತದಲ್ಲಿ ಸ್ವತಃ ಪ್ರಭುತ್ವ ಗಳಿಸಿದವರಾಗಿದ್ದರು. ಅನೇಕ ಕನ್ನಡ ಗೀತೆಗಳನ್ನು ರಚಿಸಿದ್ದ ಅವರಿಗೆ ಪಾಶ್ಚಾತ್ಯ ಸಂಗೀತದಲ್ಲೂ ವಿಶೇಷ ಆಸಕ್ತಿಯಿತ್ತು. ಹೆಸರಾಂತ ಸಂಗೀತಗಾರರಾದ ರಿಚರ್ಡ್ ವ್ಯಾಗ್ನರ್, ಫಾನ್ ಬೇತೋವನ್, ಬಾಕ್ ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಅವರ ಹಲವು ಕೃತಿಗಳು ನಾದ ಮಾಧುರ್ಯಕ್ಕೆ ಹೆಸರುವಾಸಿ.

ಬೇರೆ ಭಾಷೆಗಳಲ್ಲಿದ್ದ ಭಾರತೀಯ ಸಂಸ್ಕೃತಿಯ ವಿಚಾರಧಾರೆಯನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಲು ಜಯಚಾಮರಾಜೇಂದ್ರ 'ಗ್ರಂಥ ರತ್ನಮಾಲಾ', 'ವೇದ ರತ್ನಮಾಲಾ ಪ್ರಕಟಣಾಮಾಲೆ' ಆರಂಭಿಸಿದರು. ಆ ಮಾಲಿಕೆಗಳ ಮೂಲಕ ಒಂದು ಲಕ್ಷ ಪುಟಗಳಿಗೂ ಹೆಚ್ಚು ಸಾಹಿತ್ಯವನ್ನು ಕನ್ನಡಕ್ಕೆ ಕೊಡುಗೆಯಾಗಿ ಇತ್ತರು.

ಜಯಚಾಮರಾಜ ಒಡೆಯರ್ ಅನೇಕ ತತ್ವಶಾಸ್ತ್ರ ಹಾಗೂ ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದು, ಅವುಗಳಲ್ಲಿ 'ದತ್ತಾತ್ರೇಯ ದಿ ವೇ ಅಂಡ್ ದ ಗೋಲ್' ಬಹು ಮೌಲಿಕ ಗ್ರಂಥ. ಆ ಕೃತಿಗೆ ಶಿಕ್ಷಣವೇತ್ತ ಹಾಗೂ ಭಾರತದ ರಾಷ್ಟ್ರಪತಿಗಳಾಗಿದ್ದ ಎಸ್. ರಾಧಾಕೃಷ್ಣನ್ ಅವರ ಮುನ್ನುಡಿ ಇದೆ.

'ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು', 'ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್', 'ಆತ್ಮ ಮತ್ತು ಬ್ರಹ್ಮ' – ಇವು ಚಾಮರಾಜರ ಮುಖ್ಯ ಕೃತಿಗಳು. ಕರ್ನಾಟಕ ಸಂಗೀತವನ್ನು ಆಳವಾಗಿ ಅಭ್ಯಾಸ ಮಾಡಿದ್ದ ಅವರು ಪಾಶ್ಚಾತ್ಯ ಸಂಗೀತವನ್ನು ಅರಿತಿದ್ದು, ಲಂಡನ್ ಗಿಲ್ಡ್‌ಹಾಲ್ ಸಂಗೀತಶಾಲೆಯ ಪದವೀಧರರಾಗಿದ್ದರು. ರಾಜಪ್ರಭುತ್ವದಲ್ಲಿ ಮಹಾರಾಜರಾಗಿದ್ದು, ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ ಜಯಚಾಮರಾಜ ಒಡೆಯರ್ ಅವರಿಗೆ ಬನಾರಸ್ ವಿಶ್ವವಿದ್ಯಾಲಯವೂ ಸೇರಿದಂತೆ ದೇಶ ವಿದೇಶಗಳ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಗಳು ಸಂದಿದ್ದವು.

ವಿಶ್ವಪ್ರಸಿದ್ಧ ಮೈಸೂರು ದಸರಾ ಉತ್ಸವದ ಮುಕುಟಪ್ರಾಯವಾದ ಆನೆ ಅಂಬಾರಿಯಲ್ಲಿ ಕುಳಿತ ಕೊನೆಯ ಅರಸ ಜಯಚಾಮರಾಜ ಒಡೆಯರ್. ತತ್ವಶಾಸ್ತ್ರ, ಸಂಗೀತದಲ್ಲಿ ಪಾಂಡಿತ್ಯ ಸಾಧಿಸಿದ್ದ ಇವರು ಚಿಕ್ಕಂದಿನಲ್ಲಿ ಸ್ಕೌಟ್ ಆಗಿದ್ದರು. ಒಳ್ಳೆಯ ಕುದುರೆ ಸವಾರರಾಗಿದ್ದ ಅವರು ಪಿಯಾನೋ ವಾದಕರೂ ಹೌದು. ಆಧುನಿಕ ಕರ್ನಾಟಕ ರೂಪುಗೊಳ್ಳಲು ಪ್ರಮುಖ ಪಾತ್ರ ವಹಿಸಿದ್ದ ಧೀಮಂತ ಅರಸನ ಜನ್ಮಶತಮಾನೋತ್ಸವ ಸಂದರ್ಭ, ಅವರ ವ್ಯಕ್ತಿತ್ವ–ಸಾಧನೆಯನ್ನು ಈ ತಲೆಮಾರು ನೆನಪಿಸಿಕೊಳ್ಳಬೇಕಾದ ಸಂದರ್ಭವೂ.